

## ಒಂಟೆ ಏರಿ, ಮಕ್ಕಳ ಸವಾರಿ

ರಾಜ್ಯದಲ್ಲಿ ಒಂಟೆ ಸಾಕೋದೇ ಇಲ್ಲವೆಂದು ಮೇಲೆ ಇನ್ನು ಸವಾರಿ ಎಲ್ಲಿಂದ ಸಾಧ್ಯ... ಎಂದು ಪ್ರಶ್ನೆಗೊಳಗಾಗಬೇಡಿ. ಸವಾರಿಗೆ ಅದನ್ನು ಸಾಕಲೇಬೇಕಂತೇನೂ ಇಲ್ಲ. ಹೊಟ್ಟೆಪಾಡಿಗಾಗಿ ಬೇರೆ ಕಡೆಯಿಂದ ರಾಜ್ಯಕ್ಕೆ ಆಗಮಿಸಿ ಒಂಟೆ ಸವಾರಿ ಮೂಲಕ ಚೂರುಪಾರು ಹಣ ಗಳಿಸಿ ಜೀವನ ಸಾಗಿಸುವವರು ಆಗಾಗ ಅಲ್ಲಲ್ಲಿ ಕಂಡು ಬರುತ್ತಾರೆ.

ಕುದುರೆ ಸವಾರಿ, ಆನೆ ಸವಾರಿ ಇಷ್ಟಪಡುವ ಮಕ್ಕಳಿಗೆ ಒಂಟೆ ಸವಾರಿ ಇಷ್ಟವಾಗದೆ ಇರುತ್ತಾ? ಒಂಟೆ ಕಂಡೊಡನೆ ಖುಷಿಪಡುವ ಮಕ್ಕಳು ಅದರ ಸವಾರಿ ಮಾಡಲು ಇನ್ನಷ್ಟು ಉತ್ಸುಕರಾಗುತ್ತಾರೆ. ಅದರ ಮೇಲೆ ಕೂತು ಓಲಾಡುತ್ತಾ ಸಾಗುವುದೇ ಅವರಿಗೊಂದು ಮೋಜು. ರಾಜಸ್ಥಾನದಲ್ಲಿ ಒಂಟೆ ಸಾಕುವವರು ವರ್ಷಕ್ಕೆ ಒಂದೆರಡು ಬಾರಿ ಒಂಟೆಗಳೊಂದಿಗೆ ಬೀದರ್ ಸೇರಿದಂತೆ ರಾಜ್ಯದ ಕೆಲವೆಡೆ ಕಾಣಿಸಿಕೊಳ್ಳುತ್ತಾರೆ. ಅಂತೆಯೇ ಈಚೆಗೆ ಬೀದರ್ ನಗರಕ್ಕೆ ಬಂದಿದ್ದ ಒಂಟೆ ಸವಾರಿ ಮಾಡಿಸುವವರು ಇಲ್ಲಿನ ವಿವಿಧ ಬಡಾವಣೆಗಳಿಗೆ ಹೋಗಿ ಮಕ್ಕಳನ್ನು ಒಂಟೆಯ ಮೇಲೆ ಕೂರಿಸಿ ಅಡ್ಡಾಡಿಸಿದರು.

–ಮುರಲೀಧರ ಕುಲಕರ್ಣಿ, ಬೀದರ್

## ಇದು ಸೌತೆಹಣ್ಣುಗಳ ಸಂತೆ

ಈಚೆಗೆ ನಾವು ಇಡಗುಂಜಿ, ಮುರುಡೇಶ್ವರ ಸೇರಿದಂತೆ ಕೆಲವು ದೇವಾಲಯಗಳ ದರ್ಶನಕ್ಕೆ ಹೋಗಿದ್ದೆವು. ಆಗ ಹೊನ್ನಾವರ, ಮುರುಡೇಶ್ವರ, ಭಟ್ಕಳದಲ್ಲಿ ಬಣ್ಣ ಬಣ್ಣದ ಸೌತೆ ಹಣ್ಣುಗಳ ಸಂತೆ ನಡೆಯುತ್ತಿತ್ತು. ಈ ಭಾಗದ ಹಲವೆಡೆ ಪ್ರತಿ ವರ್ಷ ದೀಪಾವಳಿ ಮೊದಲು ಸೌತೆ ಹಣ್ಣುಗಳ ಸಂತೆ ನಡೆಯುತ್ತದೆ. ವ್ಯಾಪಾರಸ್ಥರಿಗೆ ಈ ಸಂತೆ ಉತ್ತಮ ವ್ಯಾಪಾರ ನಡೆಸಲು ಸಕಾಲ. ಮುಳ್ಳು ಸೌತೆಯನ್ನು ದೂರದ ಶಿರಸಿ, ಸೊರಬ, ಸಾಗರ ತಾಲ್ಲೂಕಿನ ಹಳ್ಳಿಗಳಲ್ಲಿ ರೈತರು ಮಳೆಗಾಲದಲ್ಲಿ ಹೆಚ್ಚಾಗಿ ಬೆಳೆಯುತ್ತಾರೆ. ಮಲೆನಾಡಿಗರು ಹೆಚ್ಚಾಗಿ ಎಳೇ ಸೌತೆ ಕಾಯಿ ತಿನ್ನುವುದು ರೂಢಿ. ಇದರಿಂದ ತರಹೇವಾರಿ ಖಾದ್ಯಗಳನ್ನು ಮಾಡುತ್ತಾರೆ. ಉತ್ತರಕನ್ನಡ ಜಿಲ್ಲೆಯ ಕರಾವಳಿಯ ತಾಲ್ಲೂಕುಗಳ ಜನತೆ ದೀಪಾವಳಿ ಹಬ್ಬಕ್ಕೆ ಕಡುಬು ತಯಾರಿಸಲು ಈ ಸೌತೆ ಹಣ್ಣುಗಳನ್ನು ಉಪಯೋಗಿಸುತ್ತಾರೆ. ಘಟ್ಟದ ಮೇಲಿರುವ ಕೆಲ ಮಲೆನಾಡಿಗರು ಸಿಹಿ ಕುಂಬಳಕಾಯಿಂದ ಸಿಹಿ ಕಡುಬು ಮಾಡಿ ದೀಪಾವಳಿಯಂದು ಸವಿಯುತ್ತಾರೆ.

–ಶ್ರೀಮತಿ ಪಿ. ಪಾಟೀಲ್, ರಾಣೆಬೆನ್ನೂರು









